

# ವಿಶ್ವದ ಮೊದಲ ಪ್ರೇಮ ಶುಭಾಶಯದ ಪತ್ರ

ಸಾಮಾನ್ಯವಾಗಿ ಪ್ರೇಮಿಗಳು ಉಡುಗೊರೆಯೊಂದಿಗೆ ಸುಂದರವಾದ ಶುಭಾಶಯ ಪತ್ರ ನೀಡುವುದರ ಮೂಲಕ ತಮ್ಮ ಪ್ರೇಮ ನಿವೇದನೆ ಮಾಡಿಕೊಳ್ಳುತ್ತಾರೆ. ಹಾಗಾದರೆ ಮೊದಲು ಮುದ್ರಣಗೊಳ್ಳುತ್ತಿದ್ದ ಗ್ರೀಟಿಂಗ್ ಕಾರ್ಡ್ ಹೇಗಿರಬಹುದು ಎಂಬುದು ಕುತೂಹಲಕಾರಿ ಅಲ್ಲವೇ?

ಚಿತ್ರದಲ್ಲಿರುವುದು ಬಹುಶಃ ಇಡೀ ಪ್ರಪಂಚದಲ್ಲೇ ಮೊದಲು ಮುದ್ರಣಗೊಂಡಿರಬಹುದಾದ ವ್ಯಾಲೆಂಟೈನ್ ಗ್ರೀಟಿಂಗ್ ಕಾರ್ಡ್. ಇದು ಇಂಗ್ಲೆಂಡ್‌ನ ಯಾರ್ಕ್‌ನಲ್ಲಿ 'ಯಾರ್ಕ್ ಕ್ಯಾಸಲ್ ಮ್ಯೂಸಿಯಂ'ನ ಸಂಗ್ರಹದಲ್ಲಿದೆ. ಲಂಡನ್‌ನಲ್ಲಿ 1797ನೇ ಇಸವಿಯಲ್ಲಿ ಇದು ಮುದ್ರಣಗೊಂಡಿದೆ. ಅತ್ಯಂತ ನಾಜೂಕಾಗಿರುವ ಈ ಕಾರ್ಡ್‌ನ ಮೂಲೆಗಳಲ್ಲಿ ಚುಚ್ಚಿ ಲೇಸ್ ಎಫೆಕ್ಟ್ ಬರುವಂತೆ ಮಾಡಲಾಗಿದೆ ಹಾಗೂ ಮುದ್ರಣದ ನಂತರ ಕ್ಯುಪಿಡ್ (ರೋಮನ್ನರ ಪ್ರೇಮ ದೇವತೆ) ಪಾರಿವಾಳಗಳು ಮತ್ತು ಹೂಗಳನ್ನು ಕೈಯಿಂದಲೇ ಪೈಂಟ್ ಮಾಡಲಾಗಿದೆ. (ಏಕೆಂದರೆ ಪೂರ್ತಿ ವರ್ಣದ ಮುದ್ರಣ 18 ನೇ ಶತಮಾನದಲ್ಲಿರಲಿಲ್ಲ)

ಪ್ರೇಮಸಂದೇಶದ ಬರಹವಿರುವ ಈ ಶುಭಾಶಯ ಪತ್ರವನ್ನು ಕ್ಯಾಥರೀನ್ ಮಾಸ್ಡೇಯು ತನ್ನ ಪ್ರಿಯಕರ ಮಿಸ್ಟರ್ ಬ್ರೌನ್, ಡೊವರ್ ಪ್ಲೇಸ್, ಕೆಂಟ್ ರೋಡ್, ಲಂಡನ್‌ಗೆ ಕಳಿಸಿಕೊಟ್ಟಿದ್ದಾಳೆ. ಪ್ರಾಯಶಃ ಇದೇ ಮೊಟ್ಟ ಮೊದಲು ಮುದ್ರಣಗೊಂಡಿರಬಹುದಾದ ವ್ಯಾಲೆಂಟೈನ್ ಗ್ರೀಟಿಂಗ್ ಕಾರ್ಡ್ ಎನ್ನಲಾಗಿದೆ.

■ ವಿವಿಎಚ್